
# ಸದಾ ಕಲಾ ಜೀವನದ್ದೇ ನೆನಪು

ತಂದೆಯವರ ಜತೆಗೂಡಿ ರಂಗಭೂಮಿಯಲ್ಲಿ ಬಣ್ಣಹಚ್ಚಿ ಅನೇಕ ಪಾತ್ರಗಳ ನಿರ್ವಹಣೆ ಮಾಡಿದ್ದು, ಬಹುಮಾನಗಳನ್ನೂ ಪಡೆದದ್ದು ಈಗಲೂ ಅವಿಸ್ಮರಣೀಯ ನೆನಪುಗಳೇ ಸರಿ!

■ ರವಿರಾಜ ಹಾಲಾಡಿ



'ಬೆಳೆಯುವ ಸಿರಿ ಮೊಳಕೆಯಲ್ಲಿ' ಎನ್ನುತ್ತಾರೆ. ಆವಾಗಲೇ ಅದರ ಮುಂದಿನ ಭವಿಷ್ಯದ ಕಲ್ಪನೆ ಬಂದಿರುತ್ತದೆ. ಎಲ್ಲವೂ ಹಾಗೆ ಗೊತ್ತಾಗಬೇಕು ಅಂತೇನಿಲ್ಲ. ಬೆಳೆದಂತೆಲ್ಲ ಹೊರಳುದಾರಿ ತೆರೆದು ಅದರಲ್ಲಿ ಹೆಜ್ಜೆ ಹಾಕುತ್ತಾ ಇನ್ನಾವುದೋ ತಾಣ ಸೇರುವ ಯಾನವೂ ಇಲ್ಲದಿಲ್ಲ. ನನ್ನ ಮಟ್ಟಿಗೆ ಹಾಗೇ ಆಗಿದೆ ಅಂದುಕೊಂಡಿದ್ದೀನಿ.

ನನ್ನ ಅಪ್ಪಯ್ಯ ಪ್ರಭಾಕರ ಹಾಲಂಬಿಯವರಿಗೆ ನಾಟಕದ ಗೀಳು. ಬಹು ಹಿಂದೆ ಐವತ್ತು ಅರವತ್ತರ ದಶಕದಲ್ಲೇ ಕಂಪೆನಿ ನಾಟಕದಲ್ಲಿ ಪಾತ್ರ ಮಾಡುತ್ತಾ ಊರೂರು ತಿರುಗುವ ಹಣೆಬರಹ ಅಂಟಿಸಿ ಕೊಂಡಾಗಿತ್ತು. ಜೊತೆಯಲ್ಲಿ ಆಗಾಗ ನನ್ನನ್ನೂ ಬಾಲ ನಟನ ಪಾತ್ರಕ್ಕೆ ಕರೆದೊಯ್ಯುತ್ತಿದ್ದರು. ಆಗವರು ಕರ್ನಾಟಕ ಥಿಯೇಟರ್ಸ್, ಮಂಗಳೂರು .. ಶ್ರೀ ಥಿಯೇಟರ್ಸ್ ಬಾರ್ಕೂರು ಮುಂತಾದ ನಾಟಕ ಕಂಪೆನಿಗಳಲ್ಲಿ ಗಾಯಕ ನಟನಾಗಿ ತೊಡಗಿಸಿಕೊಂಡಿದ್ದರು. ನನ್ನ ಹತ್ತು ಹನ್ನೆರಡರ ಪ್ರಾಯದವರೆಗೂ ಜೊತೆಗೇ ಹೋಗುತ್ತಿದ್ದೆನಲ್ಲಾ, ಹಾಗಾಗಿ ಪ್ರಾಥಮಿಕ ವಿದ್ಯಾಭ್ಯಾಸಕ್ಕೂ ಕುತ್ತು ಬಂದಿತ್ತು. ಕೆಲವು ಸ್ಪಷ್ಟ ಇನ್ನು ಕೆಲವು ಅಸ್ಪಷ್ಟ ನೆನಪುಗಳು ಈಗಲೂ ಮಿಂಚಿ ಮಾಯವಾಗುತ್ತವೆ.

ಆ ದಿನಗಳಲ್ಲಿ ಬಾರ್ಕೂರಿನ ವಿ ವಿ ನಾಯ್ಕರು, ಮಂಗಳೂರಿನ ಇಂದುಶೇಖರರು , ಹಾಸ್ಯ ನಟ ಲಕ್ಷ್ಮೀನಾರಾಯಣ ರಾವ್, ಆರೂರಿನ ರಘುರಾಮ ರಾವ್, ಅವರ ಮಗಳು ಆರೂರು ಸತ್ಯಭಾಮಾ, ಬಸ್ರೂರು ಆನಂದು, ಕುಂದಾಪುರದ ಶಕುಂತಳಾ, ಬಾಬುರಾವ್, ದೇಶಪಾಂಡೆ ಅನ್ನೋರು, ನನ್ನ ತಂದೆಯವರು ಇನ್ನೂ ಅನೇಕರ ಅದ್ಭುತ ನಟನೆಗಳನ್ನು ಹತ್ತಿರದಿಂದ ನೋಡಿ, ಅವರ ಜೊತೆ ಲೋಹಿತಾಶ್ವ, ಅಂಗದ, ಅಕ್ಷಯ, ಟಿಪ್ಪುವಿನ ಮಗ ಮುಂತಾದ ಬಾಲ ಪಾತ್ರ ಮಾಡುತ್ತ ಕಳೆದ ದಿನಗಳು ನೆನಪಾಗುತ್ತವೆ. ಬಾರ್ಕೂರಿನ ಬುಡಾನ್ ಸಾಹೇಬರು, ಅವರ ಅಳಿಯಂದಿರಾದ ಮೀರಾ ಸಾಹೇಬ್, ಬಾಷಾ ಸಾಹೇಬ್ ಇವರ ಟೆಂಟು, ಗ್ರೀನ್ ರೂಂ ಕೆಲಸ ನೆನಪಾಗುತ್ತವೆ.

ಆದರೆ ಇವೆಲ್ಲ 1966 ನೇ ಇಸವಿಯಲ್ಲಿ ನನ್ನ ಅಪ್ಪಯ್ಯನ ಸಹೋದರನೊಬ್ಬನ ಅಕಾಲ ನಿಧನಕ್ಕೆ ನಿಂತು ಹೋಯ್ತು. ಮತ್ತೆ ಅಪ್ಪಯ್ಯ ಕಂಪನಿಗೆ ಹೋಗಲಿಲ್ಲ. ಆದರೆ ನನ್ನ ವಿದ್ಯಾಭ್ಯಾಸ ಕುಂಟುತ್ತ ಸಾಗುವುದು ನಿಂತು ಸುಲಲಿತವಾಗಿ ಸಾಗುವೆಡೆ ದಾರಿಯಾಯ್ತು.

ಕಂಪೆನಿಯಲ್ಲಿ ಬಣ್ಣ ಹಚ್ಚಿದ್ದು ನಿಂತರೂ ನಂತರ ಪ್ರತೀ ವರ್ಷ ಹತ್ತಿರದ ಸಣ್ಣ ಶಾಲೆಗಳ ವಾರ್ಷಿಕೋತ್ಸವಗಳಲ್ಲಿ ಭಾಗವಹಿಸುವುದು ನಿಲ್ಲಲಿಲ್ಲ . ಹಾಗೇನೇ 1973 ರಲ್ಲಿ ನನ್ನ ಪದವಿ ಓದಿನ ಕೊನೆಯ ವರ್ಷದಲ್ಲಿ ಕುಂದಾಪುರದ 'ರೂಪರಂಗ' ಕಲಾ ಸಂಸ್ಥೆಯ ಸ್ಪರ್ಧಾತ್ಮಕ ನಾಟಕದಲ್ಲಿ ಭಾಗವಹಿಸುವ ಅವಕಾಶವೂ ದೊರೆಯಿತು. 'ಮಲಮಗಳು' (ಮುದುಕನ ಮದುವೆ) ನಾಟಕದಲ್ಲಿ ನನಗೆ ಮಂದಾಕಿನಿಯ ಪಾತ್ರ. ಗಂಗೊಳ್ಳಿಯ ಪಾಂಡುರಂಗ ಎನ್ನುವ ಉತ್ತಮ ಸಂಗೀತ ಕಲಾವಿದರ ಜೋಡಿಯಾಗಿ ಪಾತ್ರ. (ನಾನು ಕಾಂಚನಳ ಹಾಗೆ ಕಾಣಿಸುತ್ತಿದ್ದೆ ಅಂದಿದ್ರು) ಜೊತೆಗೆ ಕುಳ್ಳಪ್ಪು (ಬಾಲಕೃಷ್ಣ), ಬಸ್ರೂರು ಆನಂದು, ವೈಕುಂಠ ಹೆಬ್ಬಾರರು, ತಂತ್ರಿ, ಗಣಪತಿ ಮೈಪಾಡಿ ಮುಂತಾದ ದಿಗ್ಗಜ ಕಲಾವಿದರ ಗಡಣ .. ನಾಗೇಶ ನಕ್ಕತ್ತಾಯರ ಸಮರ್ಥ ನಿರ್ದೇಶನ .. ಹಲವು ವಿಭಾಗಗಳಲ್ಲಿ ಬಹುಮಾನಗಳೂ ಬಂದವು.

ಮುಂದೆ ಕಲಾಜೀವನಕ್ಕೆ ಬದಲಾಗಿ ತುತ್ತಿನ ಚೀಲ ತುಂಬಿಕೊಳ್ಳುವ ಕಾಯಕವಾಗಿ ಬ್ಯಾಂಕು ಗುಮಾಸ್ತನಾಗಿ ಜೀವನ .. ಆದರೆ ಅಭಿನಯ ಕಲೆ ಆಕಾರ ಬದಲಿಸಿ ಜೊತೆಯಾಗೇ ಬಂತು .. ಹೊಸ ಹವ್ಯಾಸವಾಗಿ ವ್ಯಂಗ್ಯಚಿತ್ರ ರಚನೆ ಜೊತೆಯಾಯ್ತು! ನದಿ ಸಾಗರ ಸೇರೆ ಏನೆಲ್ಲ ಎದುರಾದರೂ ಸುಮ್ಮನಿರುವುದೇ? ತನ್ನ ಪಾತ್ರ ಬದಲಿಸುತ್ತಾ ಹೇಗೋ ಏನೋ ಮುಂದರಿದಂತೆ, ಅಭಿನಯ ಕಲೆ ವ್ಯಂಗ್ಯಚಿತ್ರ ಕಲೆಯಾಗಿ ಬದಲಾಗಿ ಜೊತೆಗೇ ಅಂಟಿಕೊಂಡಿತು. ನಾನು ಕಲಿತ ವಿಜ್ಞಾನ ವಿಭಾಗ ತೊರೆದು ವಾಣಿಜ್ಯ ಕ್ಷೇತ್ರದಲ್ಲಿ ವೃತ್ತಿಯಾದಂತೆ ಪ್ರವೃತ್ತಿಯಲ್ಲಿ ನಾಟಕ ಮಾಯವಾಗಿ ವ್ಯಂಗ್ಯಚಿತ್ರ ಕಲೆ ತೆರೆದುಕೊಂಡು ಇನ್ನೊಂದೆಡೆ ನನ್ನ ಬೆಳೆಸಿತು. ಒಂದೊಮ್ಮೆ ಆಗ ನನ್ನ ಅಪ್ಪಯ್ಯ ಕಂಪೆನಿ ಬಿಡದೆ ನಾನೂ ಅದೇ ರಂಗಕ್ಕೆ ತೆರಳಿ ವಿದ್ಯಾವಿಹೀನನಾಗಿ ಪಶುವಂತೆ ದುರಭ್ಯಾಸಗಳ ದಾಸನಾಗಿ ನರಳುವ ಸ್ಥಿತಿ ಬಂದಿರುತ್ತಿತ್ತೇ ಎಂದು ಈಗಲೂ ಒಮ್ಮೊಮ್ಮೆ ನಡುಗಿ ಬೆವರುತ್ತೇನೆ! ■

**ನೀವೂ ಬರೆಯಿರಿ**

*ಸವಿ ಸವಿ ನೆನಪು..*

*ಬದುಕಿನಲ್ಲಿ ಸಾವಿರ ಸವಿನೆನಪುಗಳಿವೆ. ಅಂತಹ ನೆನಪುಗಳಲ್ಲಿ ಒಂದನ್ನು ಹೆಕ್ಕಿ ತೆಗೆದು ಅಕ್ಷರ ರೂಪಕ್ಕಿಳಿಸಿ. ಈ ಅಂಕಣಕ್ಕೆ ಕಳಿಸುವ ಚಿತ್ರ ಉತ್ತಮ ಗುಣಮಟ್ಟದ್ದಾಗಿರಬೇಕು. ಚಿತ್ರಗಳಿಲ್ಲದ ಬರಹವನ್ನು ಸ್ವೀಕರಿಸಲಾಗುವುದಿಲ್ಲ. ಬರಹ ಸುಮಾರು 400 ಶಬ್ದಗಳಿರಲಿ. ನಿಮ್ಮ ಹೆಸರು, ವಿಳಾಸ, ಫೋನ್ ನಂಬರ್ ಸ್ಪಷ್ಟವಾಗಿ ಬರೆಯಿರಿ.*